# ಎದೆಯೊಳಗೊಂದು ಹೊಗೆಯಗೂಡು



**ಕೃಪಾ ದೇವರಾಜ್**

ಕಲೆ: ಜಬೀವುಲ್ಲಾ ಎಂ. ಅಸದ್

ನನ್ನೆದೆಯ ಒಲೆಯ ಗೂಡೊಳಗೆ
ಹಸಿ ಕಟ್ಟಿಗೆಯನ್ನು ಒಟ್ಟಿ
ಒಲೆಯನ್ನುರಿಸಲು ಹೆಣಗಾಡುತ್ತಿರುವೆ
ಬೆಂಕಿ ಹೊತ್ತದೇ ದಟ್ಟಹೊಗೆಯಾವರಿಸಿದೆ
ಒಮ್ಮೆ ಬೆಂಕಿ ಹತ್ತಿ ನಿರಾಳವಾಗಿದ್ದರೆ ಸಾಕಿತ್ತು
ತಪ್ಪು ಒದ್ದೆಯಾದ ಒಲೆಯದ್ದೋ
ಹಸಿಕಟ್ಟಿಗೆಯದ್ದೋ... ಮದ್ದಿನುರಿ ಬೀಳುವ
ಬೆಂಕಿ ಕಡ್ಡಿಯದೋ... ತಳ ಹತ್ತಿದ ಸೀಮೆಎಣ್ಣೆ
ಡಬ್ಬಿಯದ್ದೋ ತಿಳಿಯದಾಗಿದೆ

ಉಸಿರತಿದಿಯೊತ್ತಿ ಊದುತ್ತಿರುವೆ
ಬೆಂಕಿ ಉರಿಯುತ್ತಿಲ್ಲ
ಎದೆಯಗೂಡೊಳಗೆ ಹೊಗೆಯಾವರಿಸಿ
ಉಸಿರುಗಟ್ಟುತ್ತಿದೆ ಉಬ್ಬಸವಾದಂತೆ
ಎದೆಯೊಳಗೆ ನೋವು ತಿದಿಯೊತ್ತಿದೆ
ಹೊಗೆಯ ಘಾಟಿಗೋ ಏನೋ
ಕಣ್ಣೊರೆಸಿ ಒರೆಸಿ ಕೆಂಪಾಗಿದೆ

ಛಿದ್ರಗೊಂಡ ಹೃದಯವನ್ನು ಹೆಕ್ಕಿಕೊಂಡು
ಗಟ್ಟಿಯಾಗಿ ಒತ್ತಿ ಹಿಡಿದಿರುವೆ
ಹೃದ್ಯ ಮತ್ತೆ ಹರಿಯದಂತೆ
ತಾಳಲಾರದ ವೇದನೆಗೊಂದು
ಊದುಕೊಳವೆ ಹುಡುಕುತ್ತಿರುವೆ
ಇಲ್ಲೇ ಇತ್ತು... ತಪ್ಪಿಸಿಕೊಂಡಿದೆ
ಒಂದೆರಡು ಬಾರಿ ಉಫ್... ಉಫ್...
ಎಂದು ಉರುಗಿದ್ದರೆ ಸಾಕಿತ್ತು

ಭಗ್ ಎಂದು ಬೆಂಕಿ ಹತ್ತಿಕೊಳ್ಳಲು
ಕಾಣದಾದ ಊದುಕೊಳವೆಯನ್ನು
ಹುಡುಕುತ್ತಿರುವೆ
ಕೊಂಚ ಗಾಳಿ ಬೀಸಿದ್ದರೂ ಸಾಕಿತ್ತು
ಬೆಂಕಿ ಹತ್ತಿ ಉರಿಯುತ್ತಿತ್ತು
ಎದೆಯೊಳಗಿನ ಹೊಗೆಯಗೂಡು



